ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1126/24**

ಪಿಡಬ್ಲ್ಯುಃ – 2

ಸಿಡಬ್ಲ್ಯುಃ – 2

ದಿನಾಂಕಃ 11.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು – ಪುಷ್ಪಲತಾ

ಗಂಡನ ಹೆಸರು – ವಿಜಯ ಕುಮಾರ್

ವಯಸ್ಸು – 50 ವರ್ಷ

ವೃತ್ತಿ – ಟೈಲರಿಂಗ್ ಕೆಲಸ

ವಾಸಸ್ಥಳ – ಸಂಪಾಜೆ

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-1 ನನ್ನ ಗಂಡ. ಚಾಸಾ-3 ನನ್ನ ಮಗ. ಚಾಸಾ-4 ರಿಂದ 16 ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು. ನಾವು ಕಲ್ಲುಗುಂಡಿ ಗ್ರಾಮದಲ್ಲಿ ಶೃಂಗಾರ್ ಟೈಲರ್ಸ್ ಹೆಸರಿನಲ್ಲಿ ಅಂಗಡಿ ನಡೆಸುತ್ತಿದ್ದೇನೆ. ನಾವು ವಾಸವಿರುವ ಮನೆ ಸಂಪಾಜೆ ಗ್ರಾಮದಲ್ಲಿ ಇದೆ. ದಿಃ 08.02.2024 ರಂದು ಬೆಳಗ್ಗೆ 10.00 ಗಂಟೆಗೆ ನಾನು, ಚಾಸಾ-1 ಮತ್ತು ಚಾಸಾ-3 ಸದರಿ ನನ್ನ ಟೈಲರಿಂಗ್ ಅಂಗಡಿಗೆ ಹೋದೆವು. ನಂತರ ಅದೇ ದಿನ ಬ್ಯಾಂಕಿನಲ್ಲಿ ಏನೋ ಕೆಲಸ ಇದೆ ಎಂದು ಹೇಳಿ ಚಾಸಾ-3 ಬೆಃ 11.00 ಗಂಟೆಗೆ ಸುಳ್ಯಗೆ ಹೋದನು. ನಾನು, ಚಾಸಾ-1, ಚಾಸಾ-3 ಅಂಗಡಿಯನ್ನು ಬಂದ್ ಮಾಡಿ ಸಂಜೆ 8.00 ಗಂಟೆಗೆ ಅಲ್ಲಿಂದ ಹೊರಟು ಮನೆಗೆ ಬಂದೆವು. ನಮ್ಮ ಮನೆಗೆ ಬಂದು ನೋಡಿದಾಗ, ನಮ್ಮ ಮನೆಯ ಮುಂಬಾಗಿಲು ಅರ್ಧ ತೆಗೆದಿತ್ತು, ನಾನು ಮತ್ತು ಚಾಸಾ-1 ಒಳಗೆ ಹೋಗಿ ನೋಡಿದಾಗ ನಮ್ಮ ಮನೆಯಲ್ಲಿದ್ದ ಗಾದ್ರೆಜ್ ಬೀರು ಬಾಗಿಲು ತೆರೆದಿತ್ತು, ಬಟ್ಟೆಗಳು ಚೆಲ್ಲಾಪಿಲ್ಲಿ ಆಗಿದ್ದವು. ನಮ್ಮ ಮನೆಯಲ್ಲಿದ್ದ ಮರದ ಡ್ರಾಯರ್ ಕೂಡ ತೆಗೆದಿತ್ತು. ನಮ್ಮ ಮನೆಯ ಮುಂಬಾಗಿಲಿನ ಬೀಗ ಒಡೆದಿತ್ತು. ಕೂಡಲೇ ಚಾಸಾ-1 ಹೋಗಿ ಪೊಲೀಸ್ ಠಾಣೆಗೆ ವಿಚಾರ ತಿಳಿಸಿ ದೂರು

ನೀಡಿರುತ್ತಾರೆ. ನಮ್ಮ ಮನೆಯ ಬೀಗ ಒಡೆದು ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ನಮಗೆ ತಿಳಿಯಿತು. ನನ್ನ ಗಾದ್ರೆಜ್ ಬೀರುವಿನಲ್ಲಿ ಇಟ್ಟಿದ್ದ ನಗದು ರೂ.20,000/- ಹಣ ಹಾಗೂ ಮರದ ಡ್ರಾಯರ್ ನಲ್ಲಿದ್ದ 22 ಗ್ರಾಂನ ಒಂದು ಚಿನ್ನದ ಸರ, 8 ಗ್ರಾಂನ ಚಿನ್ನದ ಒಂದು ಬಳೆ, ಸುಮಾರು 5 ಗ್ರಾಂನ ಚಿನ್ನದ ಉಂಗುರ, 3 ಗ್ರಾಂನ ಎರಡು ಚಿನ್ನದ ಉಂಗುರಗಳು, 2 ಗ್ರಾಂನ ಚಿನ್ನದ ತಾಳಿ ಇಷ್ಟು ಕಳುವಾಗಿದ್ದವು. ನಾನು ಎರಡು ದಿನಗಳಾದ ನಂತರ ಪುನಃ ನಮ್ಮ ಗಾದ್ರೆಜ್, ಡ್ರಾಯರ್ ಎಲ್ಲವನ್ನು ಹುಡುಕಿದೆ, ಆಗ ಬಟ್ಟೆಯ ಅಡಿಯಲ್ಲಿ ತಾಳಿ ಚೈನ್ ಸಿಕ್ಕಿತು ಮತ್ತು ಎರಡು ಚಿನ್ನದ ಉಂಗುರ ಸಿಕ್ಕಿತು. ದಿಃ 09.02.2024 ರಂದು ಪೊಲೀಸರು , ಶ್ವಾನ ದಳ, ಬೆರಳಚ್ಚು ತಜ್ಞರು ನಮ್ಮ ಮನೆಗೆ ಬಂದು ಪರಿಶೀಲಿಸಿ ಮಹಜರು ಮಾಡಿರುತ್ತಾರೆ. ದಿಃ 16.02.2024 ರಂದು ಪೊಲೀಸರು ಆರೋಪಿಗಳನ್ನು ನಮ್ಮನ್ನು ಮನೆಗೆ ಕರೆದುಕೊಂಡು ಬಂದು ಇವರೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದು ಎಂದು ತಿಳಿಸಿರುತ್ತಾರೆ. ಆಗ ಆರೋಪಿಗಳು ಕೃತ್ಯಕ್ಕೆ ಬಳಸಿದ ಸುತ್ತಿಗೆ ಮತ್ತು ಸ್ಕ್ರೂ ಡ್ರೈವರನ್ನು ಅವರು ತೋರಿಸಿದ್ದು, ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆರೋಪಿಗಳನ್ನು, ಸದರಿ ಸುತ್ತಿಗೆ ಮತ್ತು ಸ್ಕ್ರೂ ಡ್ರೈವರನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದಲು ಸಾಕ್ಷಿ ಆರೋಪಿಗಳು ಹಾಗೂ ಮು. ಮಾ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ನಾನು ನಮ್ಮ ಮನೆಯಲ್ಲಿ ಕಳುವಾಗಿದ್ದ ಚಿನ್ನಾಭರಣಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು, ಅವುಗಳನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ - ಆರೋಪಿ ಪರ ವಕೀಲರಾದ ಶ್ರೀ. ಸಿ ಎ ಪಿ ರವರಿಂದಃ-

ದಿಃ 08.02.2024 ರಂದು ಪೊಲೀಸರು ನನ್ನನ್ನು ನನ್ನ ಮನೆಯಲ್ಲಿಯೇ ವಿಚಾರಣೆ ಮಾಡಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡುವ ವೇಳೆ ನಾನು ಪೊಲೀಸರಿಗೆ ನಮ್ಮ ಮನೆಯಲ್ಲಿ ಕಳುವಾಗಿದ್ದ ಚಿನ್ನಾಭರಣಗಳ ಡಿಜೈನ್ ಬಗ್ಗೆ ಹೇಳಿದ್ದೆ. ಪೊಲೀಸರ ಮುಂದೆ ನಾನು ಚಿನ್ನಾಭರಣಗಳ ಡಿಜೈನ್ ಬಗ್ಗೆ ಹೇಳಿಲ್ಲ, ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಆ ರೀತಿ ಪೊಲೀಸರಿಗೆ ಹೇಳಿದ್ದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುತ್ತಿಗೆಗೆ ಕೆಂಪು ಬಣ್ಣ ಬಳಿದಿದೆ, ಸ್ಕ್ರೂ ಡ್ರೈವರ್ ಗೆ ಕೆಂಪು ಬಣ್ಣದ ಹಿಡಿ ಇದೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ನಾನು ಅದರ ಬಗ್ಗೆ ಹೇಳಿದ್ದೇನೆ, ಪೊಲೀಸರು ಅದನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ. ಆರೋಪಿಗಳು ನಮ್ಮ ಮನೆಯಲ್ಲಿ ಬಂದು ಕಳ್ಳತನ ಮಾಡಿಲ್ಲ

ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನಾನು ಆರೋಪಿತರನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ಚಾಸಾ-1 ರವರ ಮಾತು ಕೇಳಿ ನಾನು ಆರೋಪಿಗಳ ವಿರುದ್ಧ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.